ಮಾಡಲೇಬೇಕಲ್ಲ.' ನಾನು ಹೊರಗಡೆ ಇಣುಕಿ ನೋಡಿದೆ. ಅಮ್ಮ–ಮಗ ಟೀವಿ. ನೋಡುತ್ತ ಕುಳಿತಿದ್ದರು. ಇವಳಿಗೆ ಸಹಾಯ ಮಾಡುವವರು ಯಾರೂ ಇಲ್ಲವೆನಿಸಿತು.

'ವಿಭಾ ನೀನು ತರಕಾರಿ ನೋಡಿಕೋ ಅಷ್ಟರಲ್ಲಿ ನಾನು ಚಪಾತಿ ಮಾಡುತ್ತೇನೆ' ಎಂದೆ. 'ಬೇಡಕ್ಕ, ಅಪರೂಪಕ್ಕೆ ಬಂದಿದ್ದೀಯೆ, ಇಲ್ಲಿಯೂ ಕೆಲಸ ಮಾಡುವುದೇ, ನಿಮ್ಮ ಮನೆಯಲ್ಲಿ ಮಾಡುವುದು ಇದ್ದೇ ಇದೆ. ಇಷ್ಟಕ್ಕೂ ಇವರಿಗೆಲ್ಲಾ ಚಪಾತಿ ಬಿಸಿ ಬಿಸಿಯಾಗಿರಬೇಕು. ಎಲ್ಲರೂ ಊಟಕ್ಕೆ ಕುಳಿತ ಮೇಲೇಯೇ ಮಾಡುತ್ತೇನೆ.' ಅಷ್ಟರಲ್ಲಿ ಪ್ರಸಾದ ಟ್ಯೂಷನ್‌ನಿಂದ ಬಂದ. ವಿಭಾ ಮಾಡುತ್ತಿರುವ ಕೆಲಸವನ್ನು ಅಷ್ಟಕ್ಕೇ ಬಿಟ್ಟು ಅವನ ಬಟ್ಟೆ ಬದಲಾಯಿಸಿ, ಕೈಕಾಲು ಮುಖ ತೊಳೆದು ಕುಡಿಯಲು ಹಾಲು ಕೊಟ್ಟು ಮತ್ತೆ ತನ್ನ ಕೆಲಸದಲ್ಲಿ ತೊಡಗಿದಳು.

'ವಿಭಾ, ನೀನು ನಿಜ ಹೇಳುತ್ತಿರುವೆಯಾ?'

'ಯಾವ ವಿಷಯ?'

'ಅದೇ ಇನ್ನೊಂದು ಮಗುವಾದರೆ ಮನೆಯಲ್ಲಿ ನೋಡಿಕೊಳ್ಳುವವರು ಯಾರೂ ಇಲ್ಲ ಎಂದೆಯಲ್ಲ.' ಅವಳು ಒಣನಗೆ ನಕ್ಕು ಸುಮ್ಮನಿದ್ದಳು. ಅವಳಿಗೆ ಮನೆಯ ವಿಷಯ ಮಾತಾಡಲು ಇಷ್ಟವಿಲ್ಲವೆಂದು ಸ್ಪಷ್ಟವಾಯಿತು. ಮೌನವಾಗಿ ಊಟಕ್ಕೆ ತಟ್ಟೆ ಇಡತೊಡಗಿದಳು.

'ವಿಭಾ, ನನಗೆ ಈಗಲೇ ತಟ್ಟೆ ಇಡಬೇಡ, ನಾನೂ ನಿನ್ನ ಜೊತೆಗೇ ಊಟ ಮಾಡುತ್ತೇನೆ' ಎಂದೆ. ಅಷ್ಟರಲ್ಲಿ ಅವಳ ಅತ್ತೆ ಒಳಗೆ ಬಂದವರು– 'ಅದ್ಹೇಗಾಗುತ್ತಮ್ಮ, ಇವತ್ತು ನೀನು ನಮ್ಮ ಅತಿಥಿ. ನಿನ್ನನ್ನು ಬಿಟ್ಟು ಹೇಗೆ ಊಟ ಮಾಡುವುದು' ಎಂದು ಒತ್ತಾಯ ಮಾಡಿದರು.

